<u>ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ನವಲಗುಂದ.</u>

# FDP 09/2023

ಸಿ.ಡಬ್ಲೂ- 1

| | | |
|---|---|---|
| ಹೆಸರು | ಃ- | ಮಹೇಶ ಚಬ್ಬಿ |
| ತಂದೆ / ಗಂಡನ ಹೆಸರು | ಃ- | ಸಂಗಪ್ಪ |
| ವಯಾ | ಃ- | 34 ವರ್ಷ |
| ಉದ್ಯೋಗ | ಃ- | ಭೂ ಮಾಪಕರು |
| ವಾಸಸ್ಥಳ | ಃ- | ಕಲಘಟಗಿ |
| ಸತ್ಯ ಪ್ರತಿಜ್ಞೆ ಮೇರೆಗೆ | ಃ- | ದಿನಾಂಕಃ 19-07-2025 |

<u>ಮುಖ್ಯ ವಿಚಾರಣೆ ಃ-</u>

1) ನಾನು 2018 ರಲ್ಲಿ ನವಲಗುಂದದ ತಾಲೂಕು ತಹಶೀಲ್ದಾರ ಕಚೇರಿಯಲ್ಲಿ ಭೂ ಮಾಪಕರು ಎಂದು ನೇಮಕವಾಗಿದ್ದು, 2020 ರವರೆಗೆ ನವಲಗುಂದದಲ್ಲಿ ಭೂ ಮಾಪಕರು ಎಂದು ಕಾರ್ಯ ನಿರ್ವಹಿಸಿರುತ್ತೇನೆ. 2020 ರಿಂದ ಮೊರಬ ಗ್ರಾಮದ ಭೂ ಮಾಪಕರು ಎಂದು ನೇಮಕಗೊಂಡಿದ್ದು, ಮೇ 2025 ರವರೆಗೆ ಕಾರ್ಯ ನಿರ್ವಹಿಸಿರುತ್ತೇನೆ. ಈಗ ಕಲಘಟಗಿಗೆ ವರ್ಗಾವಣೆಯಾಗಿರುತ್ತದೆ.

2) ದಿನಾಂಕ 05-12-2023 ರಂದು ನಾನು ಅಣ್ಣಿಗೇರಿಯ ಭೂ ಮಾಪಕರ ಪ್ರಭಾರವನ್ನು ಹೊಂದಿದ್ದು ನನಗೆ ಮಾನ್ಯ ನ್ಯಾಯಾಲಯದಿಂದ FDP 09/2023 ರ ಮೋಜನಿಗೆ ತಿಳುವಳಿಕೆ ಪತ್ರ ಬಂದಿರುತ್ತದೆ. ಸದರಿ ತಿಳುವಳಿಕೆ ಪತ್ರವನ್ನು ನ್ಯಾಯಾಲಯದ ಕಡತದಲ್ಲಿ ಇದ್ದು, ಅದನ್ನು ನಿ.ಸಿ.1 ಎಂದು ಗುರುತಿಸಲಾಯಿತು.

3) ಆನಂತರ ದಿನಾಂಕ 30-01-2024 ರಂದು ಮೋಜನಿ ಮಾಡಲು ದಿನಾಂಕವನ್ನು ನಿಗದಿ ಪಡಿಸಿದ್ದು, ಪ್ರಕರಣದ ಪಕ್ಷಗಾರರಿಗೆ ನೋಂದಾಯಿತ ಅಂಚೆ ಮೂಲಕ ನೋಟಿಸನ್ನು ನೀಡಿರುತ್ತೇನೆ. ಸದರಿ ನೋಟಿಸನ ಪ್ರತಿಯನ್ನು ಈಗ ನೋಡುತ್ತಿದ್ದು ಅದನ್ನು ನಿ.ಸಿ.**2** ಎಂದು ಗುರುತಿಸಲಾಯಿತು. 05 ಅಂಚೆ ರಶೀದಿಗಳನ್ನು ಒಟ್ಟಾಗಿ ನಿ.ಸಿ.**3** ಎಂದು ಗುರುತಿಸಲಾಯಿತು. ಸದರಿ ನೋಟಿಸಗಳಲ್ಲಿ 3 ನೋಟಿಸಗಳು ಮರಳಿ ಬಂದಿರುತ್ತವೆ. ಸದರಿ ನೋಟಿಸಗಳಲ್ಲಿ ಎದುರುದಾರರಿಗೆ ಕಳುಹಿಸಿದ ನೋಟಿಸಗಳು addressee cannot be located ಅಂತಾ ಮರಳಿ ಬಂದಿರುತ್ತದೆ. ಸದರಿ ಲಕೋಟೆಗಳನ್ನು ನ್ಯಾಯಾಲಯದಲ್ಲಿ ತರೆದು ನೋಡಲಾಗಿ, 1 ರಿಂದ 3 ನೇ ಎದುರುದಾರರಿಗೆ ಕಳುಹಿಸಿದ ನೋಟಿಸಿನ ಲಕೋಟೆಗಳನ್ನು ಕ್ರಮವಾಗಿ ನಿ.ಸಿ.**4** ರಿಂದ ನಿ.ಸಿ.**6** ಹಾಗೂ ಅದರಲ್ಲಿ ಇರುವ ನೋಟಿಸಗಳನ್ನು ಕ್ರಮವಾಗಿ ನಿ.ಸಿ.4(ಎ), ನಿ.ಸಿ.5(ಎ) ಹಾಗೂ ನಿ.ಸಿ.6(ಎ) ಎಂದು ಗುರುತಿಸಲಾಯಿತು.

4) ನಂತರ ದಿನಾಂಕ 30-01-2024 ರಂದು ಅಣ್ಣಿಗೇರಿಯ ಸಿಟಿಎಸ್ ಸರ್ವೆ ಸಂಖ್ಯೆ 25 ಬಿ/9 ರ ಸ್ಥಳಕ್ಕೆ ಹೋಗಿ ನೋಡಲಾಗಿ ಅಲ್ಲಿ ಪ್ರತಿವಾದಿಯರು ಸದರಿ ಮನೆಯಲ್ಲಿ ವಾಸವಿದ್ದರು. ವಾದಿಯರು ಅಲ್ಲಿ ಉಪಸ್ಥಿತರಿದ್ದರು. ಸದರಿಯವರಲ್ಲಿ 2 ನೇ ಎದುರುದಾರರು ಉಪಸ್ಥಿತ ಇರಲಿಲ್ಲ. ನಂತರ ನಾವು ಮೋಜನಿಯನ್ನು ಪ್ರಾರಂಭ ಮಾಡಿ ಗಡಿಯನ್ನು ಗುರುತಿಸಿ ಅಲ್ಲಿ ಒಂದು ಮನೆ ಇದ್ದು ಅದನ್ನು ನಮ್ಮ ದಾಖಲೆಯನ್ನು ಪರಿಶೀಲಿಸಿ ಗುರುತು ಮಾಡಿರುತ್ತದೆ. ನಂತರ ಮನೆ ಹಾಗೂ ಸ್ಥಳವನ್ನು ಮೋಜನಿ ಮಾಡಿ ವಿಭಾಗವನ್ನು ಮಾಡಿರುತ್ತೇವೆ.

5) ಆನಂತರ ಒಂದು ವರದಿಯನ್ನು ತಯಾರು ಮಾಡಿರುತ್ತೇನೆ. ಸದರಿ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿ.ಸಿ.**7** ಎಂದು ಗುರುತಿಸಲಾಯಿತು. ನಂತರ ಸದರಿ ವರದಿಯ ಮೇಲೆ ಉಪಸ್ಥಿತರಿದ್ದ ಪಕ್ಷಗಾರರಾದ ಸಹಿಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು 1 ಮತ್ತು 2 ನೇ ಅರ್ಜಿದಾರರ ಸಹಿಗಳನ್ನು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಸಿ.7(ಎ) ಹಾಗೂ ನಿ.ಸಿ.7(ಬಿ) ಎಂದು ಗುರುತಿಸಲಾಯಿತು. ಮತ್ತೆ ಎರಡೂ ಸಾಕ್ಷಿದಾರರ ಸಹಿ ಇದ್ದು ಈಗ ಅದು ಯಾವುದು ಎಂದು ನೆನಪು ಬರುತ್ತಿಲ್ಲ. ನಂತರ ಎದುರುದಾರು ಸಹಿ ಮಾಡಲು ನಿರಾಕರಿಸಿರುತ್ತಾರೆ.

6) ನಂತರ ದಿನಾಂಕ 12-02-2024 ರಂದು ನಾನು ಮಾನ್ಯ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತೇನೆ. ಸದರಿ ಕಡತವನ್ನು ಈಗ ನೋಡುತ್ತಿದ್ದು ಅದನ್ನು ನಿ.ಸಿ.**8** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಸಿ.8(ಎ) ಎಂದು ಗುರುತಿಸಲಾಯಿತು. ಕಡತದ ಸಂಗಡ

ಸಲ್ಲಿಸಿದ ಕಚ್ಚಾ ನಕಾಶೆಯನ್ನು ಈಗ ನೋಡುತ್ತಿದ್ದು ಅದನ್ನು ನಿ.ಸಿ.**9** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಸಿ.9(ಎ) ಎಂದು ಗುರುತಿಸಲಾಯಿತು.

ಪಾಟೀಸವಾಲು ಎದುರುದಾರರ ಪರ ಃ ಶ್ರೀ ಎಂ ಜಿ ಪಿ ವಕೀಲರಿಂದ ಃ -

1) ಮೋಜನಿಯ ನೋಟಿಸ ಎದುರುದಾರರಿಗೆ ಮುಟ್ಟಿರುವುದಿಲ್ಲ ಅದು ಮರಳಿ ಬಂದಿರುತ್ತದೆ. ನಾನು ದಿನಾಂಕ 23-01-2024 ರಂದು ನಾನು ನೋಟಿಸನ್ನು ಹೊರಡಿಸಲಾಗಿದ್ದು, ಮರಳಿ ಯಾವಾಗ ಬಂದಿರುತ್ತದೆ ಎಂದು ನಿಖರವಾಗಿ ಹೇಳಲು ಈಗ ನೆನಪಿಲ್ಲ. ನಾನು ಸ್ಥಳಕ್ಕೆ ಹೋದ ನಂತರದಲ್ಲಿ ಎದುರುದಾರರಿಗೆ ನೋಟಿಸ ಮುಟ್ಟಿಲ್ಲ ಎಂದು ತಿಳಿದು ಬಂದಿರುತ್ತದೆ. ನಾನು ಮೋಜನಿಗೆ ನಿಗದಿ ಪಡಿಸಿದ ದಿನಾಂಕ, ಸ್ಥಳ ಹಾಗೂ ಸಮಯ ಎದುರುದಾರರ ಗಮನದಲ್ಲಿ ಇಲ್ಲಾ ಎಂದರೆ ಸರಿ.

2) ಎದುರುದಾರರಿಗೆ ನೋಟಿಸ ಸ್ವೀಕಾರ ಆಗದೇ ಇದ್ದ ಕಾರಣ ಅವರು ಸ್ಥಳದಲ್ಲಿ ಉಪಸ್ಥಿತ ಇರಲು ಬರುವುದಿಲ್ಲ ಎಂದರೆ ಸಾಕ್ಷಿಯು ನಾನು ಸ್ಥಳಕ್ಕೆ ಹೋದ ಸಮಯದಲ್ಲಿ ಅವರು ಅಲ್ಲಿಯೆ ವಾಸವಿದ್ದರು ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

3) ಮೋಜನಿ ದಿನಾಂಕದಂದು ನಾನು ಬೆಳಗ್ಗಿನ 10-30 ಗಂಟೆಗೆ ನನ್ನ ಕಚೇರಿಯ ಕೊಠಡಿಯಿಂದ ಹೊರಟು ಸ್ಥಳಕ್ಕೆ 11-30 ಗಂಟೆಗೆ ಮುಟ್ಟಿರುತ್ತೇನೆ. ಸ್ಥಳದಲ್ಲಿ ಎದುರುದಾರರಲ್ಲಿ ಒಬ್ಬ ವೃದ್ಧ ಮಹಿಳೆ, ಅರ್ಜಿದಾರರು ಎಲ್ಲರೂ ಹಾಗೂ ಅರ್ಧ ಗಂಟೆಯ ನಂತರದಲ್ಲಿ ಇನ್ನೊರ್ವ ವೃದ್ಧ ಪುರುಷ ಬಂದಿರುತ್ತಾರೆ. ಸದರಿಯವರನ್ನು ಹೊರತು ಪಡಿಸಿ ಅಕ್ಕ ಪಕ್ಕದ ಜನರು ಇದ್ದರು.

4) ಸ್ಥಳದಲ್ಲಿ ಪಂಚದಸ್ತರ ಸಹಿಯನ್ನು ನಿಸಿ-7 ರಲ್ಲಿ ಪಡೆದುಕೊಂಡಿರುತ್ತೇನೆ ಆದರೆ ಸದರಿಯವರ ಹೆಸರು ಗೊತ್ತಿಲ್ಲ. ಪಂಚರ ಸಹಿ ಪಡೆದುಕೊಂಡಿರುತ್ತೇನೆ ಆದರೆ ಅವರು ಹೆಸರನ್ನು ನಿಸಿ-7 ರಲ್ಲಿ ನಮೂದು ಮಾಡಿಲ್ಲ.

5) ಸ್ಥಳದಲ್ಲಿ ಅಳತೆಯನ್ನು ಮಾಡಿರುತ್ತೇನೆ ಆದರೆ ಅದರ ನಿಖರ ಅಳತೆಯನ್ನು ನಮ್ಮ ಮೂಲ ದಾಖಲಾತಿಗಳನ್ನು ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ನನ್ನ ವರದಿಯಲ್ಲಿ ನಕಾಶೆಯನ್ನು ನಮ್ಮ ಇಲಾಖೆಯ scale ಪ್ರಕಾರ ಮಾಡಿರುತ್ತೇನೆ. ಸದರಿ scale ನಮೂದು ಇರುವ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ತಂದಿರುವುದಿಲ್ಲ. ನಾನು ಸ್ಥಳದ ಅಳತೆಯನ್ನು ಮಾಡಿರುವುದಿಲ್ಲ ಆದಕಾರಣ ನನಗೆ ಸ್ಥಳದ ಉದ್ದ ಅಗಲ ಹೇಳಲು ಬರುವುದಿಲ್ಲ ಅಂದರೆ ಸರಿಯಲ್ಲ.

6) ಸ್ಥಳದ ಅಳತೆಯ ಸಮಯದಲ್ಲಿ ನಾನು ಹಾಗೂ ನನ್ನ ಸಹೊದ್ಯೋಗಿಯಾದ ಸತೀಶ ಎಂಬುವವರು ಇದ್ದರು. ಸ್ಥಳಕ್ಕೆ ನಾವಿಬ್ಬರೂ ಕೂಡಿ ಹೋಗಿರುತ್ತೇವೆ. ಸದರಿಯವರ ಬಗ್ಗೆ ನಿಪಿ-7 ರಲ್ಲಿ ಉಲ್ಲೇಖವಿಲ್ಲ ಎಂದರೆ ಸರಿ. ಸ್ಥಳದ Elevation ಮಾಡಿರುವುದಿಲ್ಲ. ಸ್ಥಳದ ಉತ್ತರ ಹಾಗೂ ದಕ್ಷಿಣಕ್ಕೆ ರಸ್ತೆ, ಪೂರ್ವಕ್ಕೆ ಸಿಟಿಎಸ್ ಸಂಖ್ಯೆ 25 ಬಿ/10 ಹಾಗೂ ಪಶ್ಚಿಮಕ್ಕೆ ಸಿಟಿಎಸ್ ಸಂಖ್ಯೆ 25 ಬಿ/8 ಇರುತ್ತದೆ.

7) ಸ್ಥಳದಲ್ಲಿ ಒಂದು ಸಣ್ಣ ಮನೆ ಇರುತ್ತದೆ ಅದರಲ್ಲಿ ವಾಸವಿರುತ್ತಾರೆ. ಸದರಿ ಮನೆಯ ಉದ್ದ ಅಗಲ ನಾನು ನಮ್ಮ ಕಚೇರಿಯ scale ದಾಖಲೆಯನ್ನು ನೋಡಿ ಹೇಳಬೇಕಾಗುತ್ತದೆ. ನನ್ನ ವರದಿಯಲ್ಲಿ ದಾವಾ ಆಸ್ತಿಗೆ 5 ವಿಭಾಗವನ್ನು ಮಾಡಿರುತ್ತೇನೆ. ಸದರಿ ವಿಭಾಗಗಳನ್ನು ಮಾಡುವ ಪೂರ್ವದಲ್ಲಿ ಸದರಿ ವಿಭಾಗಗಳಿಗೆ ರಸ್ತೆಯ ಸಂಪರ್ಕ ಇದ್ದ ಬಗ್ಗೆ ಖಾತರಿ ಪಡಿಸಿಕೊಂಡಿರುತ್ತೇನೆ. ನಂತರ ಮನೆಯಲ್ಲಿ ವಾಸವಿದ್ದವರಿಗೆ ವಾಸವಿರಲು ಅನುಕೂಲವಾಗುವಂತೆ ಖಚಿತ ಪಡಿಸಿ ಕೊಂಡಿರುತ್ತೇನೆ.

8) ಸದರಿ ಮನೆಯಲ್ಲಿ ಉತ್ತರಕ್ಕೆ ಒಂದು ಬಾಗಿಲು ಹಾಗೂ ದಕ್ಷಿಣಕ್ಕೆ ಒಂದು ಬಾಗಿಲು ಇರುತ್ತದೆ. ಸ್ಥಳದಲ್ಲಿ 2 ಮನೆಗಳು ಇದ್ದ ಬಗ್ಗೆ ನಾನು ಗಮನ ನೀಡಿಲ್ಲ ಅಂದರೆ ಸರಿಯಲ್ಲ. ಸಾಕ್ಷಿಯ ಮುಂದುವರೆದು ಅಲ್ಲಿ 2 ಮನೆಗಳು ಇದ್ದು ಇನ್ನೊಂದು ಮನೆ ಬೇರೊಂದು ಸರ್ವೆ ಸಂಖ್ಯೆಗೆ ಸೇರಿದ್ದ ಕಾರಣ ಅದನ್ನು ನಮೂದು ಮಾಡಿರುವುದಿಲ್ಲ. ನನಗೆ ಅಳತೆಗೆ ಸಂಬಂದ ನ್ಯಾಯಾಲಯದಿಂದ ವಾದ ಪತ್ರ ಹಾಗೂ ಲಗತ್ತು ದಾಖಲೆಗಳು ಸ್ವೀಕಾರವಾಗಿರುತ್ತವೆ ಅದರ ಅನುಸಾರ ಮಾಡಿರುತ್ತೇನೆ.

9) ಸಾಕ್ಷಿಯು ನ್ಯಾಯಾಲಯದಿಂದ ಬಂದ ದಾಖಲೆಗಳನ್ನು ಪರಿಶೀಲಿಸಿ ಅದರಲ್ಲಿ 2 ಮನೆಗಳು ಇದ್ದ ಬಗ್ಗೆ ನಮೂದು ಇರುತ್ತದೆ ಆದರೆ ನಮ್ಮ ಇಲಾಖಾ ದಾಖಲೆಗಳಲ್ಲಿ ಇನ್ನೊಂದು ಮನೆ ಬೇರೊಂದು ಸರ್ವೆ ಸಂಖ್ಯೆಗೆ ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ವಾದ ಪತ್ರದ ವಿವರಣೆಯಲ್ಲಿ ಮತ್ತು ಅಸ್ತಿತ್ವದಲ್ಲಿ ಹೊಂದಾಣಿಕೆ ಇರುವುದಿಲ್ಲ ಅಂದರೆ ಸರಿಯಲ್ಲ. ವಾದ ಪತ್ರದ ದಾವಾ ಆಸ್ತಿಯ ವಿವರಣೆಗೆ ಹಾಗೂ ಮೋಜನಿ ಇಲಾಖೆಯ ಆಸ್ತಿಯ ವಿವರಣೆಗೆ ಹೊಂದಾಣಿಕೆ ಇಲ್ಲಾ ಎಂದರೆ ಸರಿ.

10) ದಾವಾ ಆಸ್ತಿಗಳ ಹೊಂದಾಣಿಕೆ ಇಲ್ಲದೇ ಇದ್ದರು ಸಹ ನಾನು ಅಳತೆ ಕಾರ್ಯವನ್ನು ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನ್ಯಾಯಾಲಯದಿಂದ ಸಿಟಿಎಸ್ ಸಂಖ್ಯೆ 25 ಬಿ/9 ಎ ಹಾಗೂ 25 ಬಿ/9 ಬಿ ಅಂತಾ ಬಂದಿದ್ದು, ಸ್ಥಳದಲ್ಲಿ ಹಾಗೂ ನಮ್ಮ ದಾಖಲೆಯ ಪ್ರಕಾರ ಸಿಟಿಎಸ್ ಸಂಖ್ಯೆ 25 ಬಿ/9 ಅಂತಾ ಇದ್ದು ಅದರ ಅಳತೆಯನ್ನು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ವಾದ ಪತ್ರದ ಸಿಟಿಎಸ್ ಸಂಖ್ಯೆ ಹಾಗೂ ಅಸ್ತಿತ್ವದ ಸಿಟಿಎಸ್ ಸಂಖ್ಯೆ ವ್ಯತ್ಯಾಸವಿದೆ ಎಂದರೆ ಸಾಕ್ಷಿಯು ಸಂಖ್ಯೆಗಳಲ್ಲಿ ವ್ಯತ್ಯಾಸವಿರಬಹುದು ಆದರೆ ಆಸ್ತಿಯು ಒಂದೇ ಇರುತ್ತದೆ ಎಂದು ನುಡಿಯುತ್ತಾರೆ. ಆಸ್ತಿಯ ಸಂಖ್ಯೆಗಳಲ್ಲಿ ಹೊಂದಾಣಿಕೆ ಇಲ್ಲದ ಬಗ್ಗೆ ನನ್ನ ವರದಿಯಲ್ಲಿ ಉಲ್ಲೇಖವಿಲ್ಲ.

11) ವ್ಯತ್ಯಾಸವಿದ್ದ ಬಗ್ಗೆ ನಾನು ಉದ್ದೇಶ ಪೂರಕವಾಗಿ ವರದಿಯಲ್ಲಿ ಉಲ್ಲೇಖ ಮಾಡಿಲ್ಲ ಎಂದರೆ ಸಾಕ್ಷಿಯು ಸಂಖ್ಯೆಗಳಲ್ಲಿ ವ್ಯತ್ಯಾಸವಿದ್ದು ಆಸ್ತಿಯ ನಿಖರತೆ ನಮ್ಮ ದಾಖಲೆಗಳಲ್ಲಿ ಕಂಡು ಬರುತ್ತಿದ್ದು ನಾನು ವಾದ ಪತ್ರದಲ್ಲಿ ತಪ್ಪಾಗಿ ನಮೂದಾಗಿರಬಹುದು ಎಂದು ಊಹಿಸಿ ನನ್ನ ಕಾರ್ಯವನ್ನು ಮಾಡಿರುತ್ತೇನೆ. ವಾದ ಪತ್ರದ ನಿಖರತೆಯ ಬಗ್ಗೆ ನ್ಯಾಯಾಲಯದಿಂದ ಯಾವುದೇ ವಿವರಣೆಯನ್ನು ಪಡೆದುಕೊಂಡಿಲ್ಲ. ವಾದ ಪತ್ರದಲ್ಲಿ 2 ಮನೆಗಳ ಉಲ್ಲೇಖವಿದೆ ಎಂದರೆ ಸರಿ. ಇನ್ನೊಂದು ಮನೆಯು ಬೇರೊಂದು ಸರ್ವೆ ಸಂಖ್ಯೆಗೆ ಸೇರಿದ ಕಾರಣ ಮೋಜನಿ ಮಾಡಿಲ್ಲ. ಸದರಿ ಇನ್ನೊಂದು ಮನೆಯು 25 ಬಿ/8 ಗೆ ಸಂಬಂದ ಪಟ್ಟಿದ್ದು ಇರಬಹುದು.

12) ನ್ಯಾಯಾಲಯದ ಆದೇಶ ಪೂರ್ಣ ಪಾಲನೆ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಇಲಾಖೆಯ ದಾಖಲೆಯ ಅನುಸಾರ ಆದೇಶ ಪಾಲನೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಆದೇಶದ ಅನುಸಾರ ಪಾಲನೆ ಮಾಡಬೇಕಾಗುತ್ತದೆ ಎಂದರೆ ಸರಿ. ನ್ಯಾಯಾಲಯದ ಆದೇಶದಲ್ಲಿ ಹಾಗೂ ಇಲಾಖೆಯ ದಾಖಲೆಗಳಲ್ಲಿ ಹೊಂದಾಣಿಕೆ ಇಲ್ಲದೇ ಇದ್ದರೆ ನ್ಯಾಯಾಲಯದ ಗಮನಕ್ಕೆ ತರಬೇಕಾಗುತ್ತದೆ ಎಂದರೆ ಸರಿ.

13) ಸದರಿ ಪ್ರಕರಣದ ವ್ಯತ್ಯಾಸವನ್ನು ನನ್ನ ಕಡತದಲ್ಲಿ ಉಲ್ಲೇಖ ಮಾಡಿಲ್ಲ ಎಂದರೆ ಸರಿ. ಪ್ರಕರಣದ ಆದೇಶ ಸಂಪೂರ್ಣ ಪಾಲನೆಯಾಗಿಲ್ಲ ಎಂದರೆ ಸರಿ. ಆದಕಾರಣ ದಾವಾ ಆಸ್ತಿಗಳ ಸಂಪೂರ್ಣ ವಿಭಾಗ ಆಗಿರುವುದಿಲ್ಲ ಅಂದರೆ ಸರಿ. ನಿಸಿ-9 ರಲ್ಲಿ ಸಮಾನವಾದ ವಿಭಜನೆಯಾಗಿರುವುದಿಲ್ಲ ಅಂದರೆ ಸರಿಯಲ್ಲ.

14) ನಿಸಿ-7 ರಲ್ಲಿ ದಿನಾಂಕ ನಮೂದು ಇಲ್ಲಾ ಎಂದರೆ ಸರಿ. ನಾನು ಸ್ಥಳಕ್ಕೆ ಹೋಗಿಲ್ಲ, ಯಾವುದೇ ಮೋಜನಿಯನ್ನು ಮಾಡಿಲ್ಲ ಅಲ್ಲಿ ಎದುರುದಾರರು ಸಹ ಬಂದಿರುವುದಿಲ್ಲ, ನನ್ನ ಕೊಠಡಿಯಲ್ಲಿ ಕುಳಿತು ವರದಿಯನ್ನು ತಯಾರು ಮಾಡಿರುತ್ತೇನೆ ಅಂದರೆ ಸರಿಯಲ್ಲ. ನಿಯಮಗಳನ್ನು ಪಾಲನೆ ಮಾಡದೇ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನೀಡಿದ ಕಾರಣ ನನ್ನ ವರದಿಯು ಊರ್ಜಿತವಲ್ಲ ಅಂದರೆ ಸರಿಯಲ್ಲ.

<u>ಪಾಟೀಸವಾಲು ಅರ್ಜಿದಾರರ ಪರ ಃ ಶ್ರೀ ವಿ ಪಿ ಪಿ ವಕೀಲರಿಂದ ಃ -</u>

1) ಅಳತೆಗೆ ನ್ಯಾಯಾಲಯದ ನಿರ್ದೇಶನ ಬಂದಿರುತ್ತದೆ. ನಾನು ಈ ಮೊದಲು ಹಲವಾರು ಸಲ ಅಳತೆಗಳನ್ನು ನ್ಯಾಯಾಲಯದ ನಿರ್ದೇಶನದ ಮೇರೆಗೆ ಮಾಡಿರುತ್ತೇನೆ. ಮೋಜನಿಯನ್ನು ನ್ಯಾಯಾಲಯದ ನಿರ್ದೇಶನದ ಮೇರೆಗೆ ಮಾಡಿರುತ್ತೇನೆ. ಅಳತೆಗೆ ನ್ಯಾಯಾಲಯದಿಂದ ಕಡತಗಳು, ಆದೇಶ, ತೀರ್ಪು ಹಾಗೂ ನಿರ್ದೇಶನಗಳು ಬಂದಿರುತ್ತವೆ. ನ್ಯಾಯಾಲಯದ ವಾರೆಂಟನಲ್ಲಿ ಪ್ಲಾಟ ಸಂಖ್ಯೆ 9 ವಿಸ್ತೀರ್ಣ 5100 ಚ.ಅಡಿ ಬಗ್ಗೆ ಮೋಜನಿ ಮಾಡಲು ಬಂದಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯ ಅಳತೆ ಮಾಡಿರುತ್ತೇನೆ.

2) ನಿಸಿ-9 ರಲ್ಲಿ ಇರುವ ನಕಾಶೆಯು ಪ್ಲಾಟ ಸಂಖ್ಯೆ 9 ಕ್ಕೆ 5100 ಚ.ಅಡಿಗೆ ಸೇರಿದ್ದು ಅದರಲ್ಲಿ ಕ್ಷೇತ್ರ ವ್ಯತ್ಯಾಸ ಇರುವುದಿಲ್ಲ. ನ್ಯಾಯಾಲಯದ ಆದೇಶದ ಅನುಸಾರ ವಿಭಾಗವನ್ನು ಮಾಡಿ ನನ್ನ ವರದಿಯನ್ನು ನೀಡಿರುತ್ತೇನೆ ಎಂದರೆ ಸರಿ. ನಕಾಶೆಯಲ್ಲಿ ಪ್ಲಾಟ ಸಂಖ್ಯೆ 9 ಕ್ಕೆ 5100 ಚ.ಅಡಿಯಲ್ಲಿ ಮನೆ ಇದ್ದ ಬಗ್ಗೆ ನಮೂದು ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು scale ನಮೂದು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಸಿ-9 ರ Scale ನ್ನು ಕೂಡಿಸಿದರೆ ಒಟ್ಟು ಕ್ಷೇತ್ರ 5100 ಚ.ಅಡಿ ಆಗುತ್ತದೆ ಎಂದರೆ ಸರಿ.

3) ನಿಸಿ-7 ಹಾಗೂ ನಿಸಿ-9 ನ್ನು ನ್ಯಾಯಾಲಯದ ಆದೇಶದ ಅನುಸಾರ ಮಾಡಿರುತ್ತೇನೆ. ಆಸ್ತಿಯ ಪ್ರಾಪರ್ಟಿ ಕಾರ್ಡನಲ್ಲಿ ಅದರ ವಿಸ್ತೀರ್ಣ 5100 ಚ.ಅ. ಇದೆ ಎಂದರೆ ಸರಿ. ನ್ಯಾಯಾಲಯದ ಆದೇಶದ ಅನುಸಾರ ಸಿಟಿಎಸ್ ಸಂಖ್ಯೆ 25 ಬಿ/9 ಎ ಹಾಗೂ 25 ಬಿ/9 ಬಿ ಎರಡೂ ಆಸ್ತಿಗಳ ಒಟ್ಟು ವಿಸ್ತೀರ್ಣ 5100 ಚ.ಅ. ಇದೆ ಎಂದರೆ ಸರಿ. ನಿಸಿ-9 ನ್ನು ಉಭಯ ಪಕ್ಷಗಾರರ ಒತ್ತಡಕ್ಕೆ ನೀಡಿರುವುದಿಲ್ಲ ಆದೇಶದ ಅನುಸಾರ ನೀಡಿರುತ್ತೇನೆ.

<u>ಪಾಟೀಸವಾಲು ಎದುರುದಾರರ ಪರ ಃ ಶ್ರೀ ಎಂ ಜಿ ಪಿ ವಕೀಲರಿಂದ ಃ -</u>

1) ನಿಸಿ-9 ರಲ್ಲಿ 5100 ಚ.ಅ.ನಮೂದು ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅಳತೆಯ ಯೂನಿಟನ್ನು square yard ನಲ್ಲಿ ನಮೂದು ಮಾಡಿರುತ್ತೇನೆ ಅದನ್ನು ಕೂಡಿಸಿದರೆ ಒಟ್ಟು ಕ್ಷೇತ್ರ 5100 ಚ.ಅಡಿ ಆಗುತ್ತದೆ.

<u>ಮರು ವಿಚಾರಣೆ ಃ ಇಲ್ಲಾ.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**